ದಿನಾಂಕಃ 16.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ. ಎಸ್ ಎಸ್ ಎನ್ ವಕೀಲರಿಂದಃ**

ಮೃತ ಸಿದ್ಧಪ್ಪ ಟಗರಿಯವರ ತಂದೆಯ ಹೆಸರು ಮಲ್ಲಪ್ಪ. ಸದರಿ ಮಲ್ಲಪ್ಪನಿಗೆ ಇಬ್ಬರು ಗಂಡು ಮಕ್ಕಳು ಹಾಗೂ 04 ಜನ ಹೆಣ್ಣು ಮಕ್ಕಳು ಇರುತ್ತಾರೆ. ಸದರಿ 04 ಜನ ಹೆಣ್ಣುಮಕ್ಕಳ ಹೆಸರುಗಳನ್ನು ನನಗೆ ಹೇಳಲು ಆಗುವುದಿಲ್ಲ. 04 ಜನ ಹೆಣ್ಣುಮಕ್ಕಳನ್ನು ಬೇರ ಬೇರೆ ಊರುಗಳಿಗೆ ಮದುವೆ ಮಾಡಿಕೊಟ್ಟಿದ್ದು, ಯಾರನ್ನು ಯಾವ ಊರಿಗೆ ಮದುವೆ ಮಾಡಿಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ಮಲ್ಲಪ್ಪನ ಕುಟುಂಬಕ್ಕೆ ಮೂರು ಜಮೀನುಗಳು ಇರುತ್ತವೆ. ಅವುಗಳ ಸರ್ವೆ ನಂಬರಗಳನ್ನು ನನಗೆ ಹೇಳಲು ಆಗುವುದಿಲ್ಲ.

ದಾವಾ ಆಸ್ತಿ ಸರ್ವೆ ನಂಬರ 398/1 ನೇದ್ದು ಮೂಲತಃ ಮೃತ ಸಿದ್ಧಪ್ಪನ ತಾಯಿ ನಿಂಗವ್ವಳ ಹೆಸರಿಗೆ ಖರೀದಿಯಾಗಿತ್ತು ಎಂದರೆ ನಿಜ. ಸದರಿ ನಿಂಗವ್ವ ಬದುಕಿದ್ದಾಗಲೇ ತನ್ನ ಮಗ ಮೃತ ಸಿದ್ಧಪ್ಪನ ಹೆಸರಿಗೆ ಸದರಿ ಆಸ್ತಿಯನ್ನು ಬಿಟ್ಟು ಕೊಟ್ಟಿರುತ್ತಾಳೆ ಎಂದರೆ ನಿಜ. ಸದರಿ ಆಸ್ತಿಯು ನಿಂಗವ್ವಳು ಖರೀದಿ ಹಿಡಿದ ಆಸ್ತಿ ಇರುತ್ತದೆಂದರೆ ನಿಜ. ಸದರಿ ಆಸ್ತಿಯನ್ನು ನಿಂಗವ್ವಳು ತನ್ನ ಮಗ ಸಿದ್ಧಪ್ಪನ ಹೆಸರಿಗೆ ಬಿಟ್ಟುಕೊಟ್ಟ ನಂತರ ಆತನ ಹೆಸರಿಗೆ ದಾಖಲಾಗಿರುತ್ತದೆಂದರೆ ನಿಜ. ಸಿದ್ಧಪ್ಪ ತನ್ನ ಕುಟುಂಬದ ಅಡಚಣೆಗಾಗಿ ಸನ್ 2012 ರಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ಮಗದುಮ್ಮ ಕುಟುಂಬದವರಿಗೆ ಖರೀದಿ ಕರಾರು ಪತ್ರ ಮಾಡಿಕೊಟ್ಟಿರುತ್ತಾನೆಂದರೆ ಸಾಕ್ಷಿಯು ಆತನಿಗೆ ಯಾವುದೇ ಕುಟುಂಬದ ಅಡಚಣೆ ಇರಲಿಲ್ಲ ಎಂದು ನುಡಿದು, ಸಿದ್ಧಪ್ಪನಿಗೆ 04 ಜನ ಮಕ್ಕಳು ಇದ್ದು, ನೌಕರಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ಸನ್ 2012 ರಲ್ಲಿ ರಾಮಸಿದ್ಧ ಮತ್ತು ಬಾಳಪ್ಪಾ ಖಾಸಗಿ ಕಂಪನಿಯಲ್ಲಿ ನೌಕರಿ ಮೂಡುತ್ತಿದ್ದರು. ಯಾವ

ವರ್ಷದಲ್ಲಿ ಅವರು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಲು ಸೇರಿರುತ್ತಾರೆಂದು ನನಗೆ ಗೊತ್ತಿಲ್ಲ. ಸನ್ 2012 ರಲ್ಲಿ ಅವರು ಎಷ್ಟು ವೇತನ ಪಡೆಯುತ್ತಿದ್ದರು ಎಂದರೆ ಸಾಕ್ಷಿಯು ಮಾಸಿಕ 10 ಸಾವಿರ ರೂ.ಗಳನ್ನು ಪಡೆಯುತ್ತಿದ್ದರು ಎಂದು ಕೇಳಿ ತಿಳಿದುಕೊಂಡಿರುತ್ತೇನೆ. ಆ ಬಗ್ಗೆ ನಾನು ದಾಖಲೆಯನ್ನು ನೋಡಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ವಾದಿಯರು ದಾವಾ ಆಸ್ತಿಯ ಕಬ್ಜೆಯಲ್ಲಿರುತ್ತಾರೆಂದು ಯಾವ ಆಧಾರದ ಮೇಲೆ ಹೇಳಿ ಬರೆಸಿರುತ್ತೀರಿ? ಎಂದರೆ ಸಾಕ್ಷಿಯು ಸ್ವತಃ ಅವರೇ ಕಬ್ಜೆಯಲ್ಲಿ ಇರುತ್ತಾರೆಂದು ನುಡಿದು, ಉತಾರೆಯನ್ನು ನೋಡಿರುತ್ತೇನೆಂದು ನುಡಿಯುತ್ತಾರೆ. ನಾನು ಸನ್ 2001 ರ ಉತಾರೆಯನ್ನು ನೋಡಿರುತ್ತೇನೆ. ಸನ್ 2025ರ ಉತಾರೆಯನ್ನು ನೋಡಿರುತ್ತೇನೆ. ಸನ್ 2025 ರ ಉತಾರೆಯಲ್ಲಿ ವಾದಿಯರ ಕುಟುಂಬದವರ ಹೆಸರು ದಾಖಲು ಇರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಮಗದುಮ್ಮ ಕುಟುಂಬದವರು ಮೋಸದಿಂದ ತಮ್ಮ ಹೆಸರುಗಳನ್ನು ದಾಖಲಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಆ ಬಗ್ಗೆ ವಾದಿಯ ಕುಟುಂಬದವರು ಮಗದುಮ್ಮ ಕುಟುಂಬದವರ ಮೇಲೆ ದೂರನ್ನು ಕೊಟ್ಟಿರುವುದಿಲ್ಲ.

ನಾನು ಪ್ರಸ್ತುತ ಗ್ರಾಮ ಪಂಚಾಯತಿ ಸದಸ್ಯ ಇರುತ್ತೇನೆ. ನಾನು ಸಾಕಷ್ಟು ಪ್ರಕರಣಗಳಲ್ಲಿ ಹಣ ಪಡೆದುಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿದಿರುತ್ತೇನೆಂದರೆ ಸರಿಯಲ್ಲ. ಮೃತ ಸಿದ್ಧಪ್ಪ ಕುಡಿತದ ಚಟಕ್ಕೆ ಬಲಿಯಾಗಿದ್ದು, ಅದರ ಗೈರು ಪಾಯದೆ ತೆಗೆದುಕೊಂಡು ಮಗದುಮ್ಮ ಕುಟುಂಬದವರು ದಾವಾ ಆಸ್ತಿ ಸರ್ವೆ ನಂಬರ 398 ನೇದ್ದನ್ನು ಮೋಸದಿಂದ ಬರೆಸಿಕೊಂಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಮಗದುಮ್ಮ ಕುಟುಂಬದವರು ತಮ್ಮ ಹೆಸರುಗಳನ್ನು ಮೋಸದಿಂದ ಸದರಿ ಆಸ್ತಿಗೆ ಸೇರಿಸಿಕೊಂಡಿರುವ ವಿಷಯ

ಯಾವಾಗ ವಾದಿಯರಿಗೆ ಗೊತ್ತಾಗಿರುತ್ತದೆಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಸಂಗತಿಯು ನನಗೆ ಸನ್ 2023 ರಲ್ಲಿ ಗೊತ್ತಾಗಿರುತ್ತದೆ. ಆ ಬಗ್ಗೆ ಮಗದುಮ್ಮ ಕುಟುಂಬದವರ ವಿರುದ್ಧ ಫಿರ್ಯಾದಿ ಕೊಡಲು ನಾನು ವಾದಿಯರಿಗೆ ಹೇಳಿರುವುದಿಲ್ಲ. ಸದರಿ ಆಸ್ತಿಯು ಮಗದುಮ್ಮ ಕುಟುಂಬದವರ ಹೆಸರಿನಲ್ಲಿ ಇದ್ದು, ಅವರೇ ಕಬ್ಜಾ ವಹಿವಾಟಿಯಲ್ಲಿದ್ದರೂ ಸಹ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಇರುವ ಬಗ್ಗೆ ನಾನು ಕೈ ಬರಹದ ಉತಾರೆಗಳು ಹಾಗೂ ಡೈರಿಗಳನ್ನು ನೋಡಿರುವುದಿಲ್ಲ. ವಾದಿಯರು ತಮ್ಮ ತಂದೆಯ ಆಸ್ತಿಯಲ್ಲಿ ಪಾಲು ಕೋರಿ ಪ್ರಸ್ತುತ ದಾವೆ ಹೂಡಿರುತ್ತಾರೆ. ವಾದಿಯರು ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ದಾವಾ ಆಸ್ತಿಯಲ್ಲಿ ತಮಗೆ ಪಾಲು ಕೊಡಿಸುವಂತೆ ನನ್ನನ್ನು ಕೇಳಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. ವಾದಿಯರು ನನಗೆ ಸಂಬಂಧಿಕರು ಆಗಿರುವದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸುಳ್ಳಾಗಿದ್ದು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)

1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ